ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 | 🖷: 08224-256051 | jsscwk@gmail.com | www. jsscwkgl.org

ಕೊಳ್ಳೇಗಾಲ: 23-9-2026 ರಂದು ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರು ಡಾ.ಶಿವರಾತ್ರಿ ರಾಜೇದ್ರ ಮಹಾಸ್ವಾಮಿಗಳವರ 111ನೆಯ ಜಯಂತಿಯ ಅಂಗವಾಗಿ ಐಕ್ಯೂಎಸಿ ಮತ್ತು ಯೂತ್ ರೆಡ್‌ಕ್ರಾಸ್ ಘಟಕದ ವತಿಯಿಂದ **"ದೇಹದಾನ ಶ್ರೇಷ್ಠದಾನ"** ಎಂಬ ವಿಷಯದ ಬಗ್ಗೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ. ಎಂ.ಎನ್. ಶ್ಯಾಮಸುಂದರ್, ಹಿರಿಯ ಅಂಗರಚನಾಶಾಸ್ತ್ರ ಪ್ರಾಧ್ಯಾಪಕರು, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಮೈಸೂರು ಇವರು ದೇಹದಾನ ಎಂಬುದು ಮರಣ ನಂತರ ದೇಹವನ್ನು ದಾನ ಮಾಡುವುದರಿಂದ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ ಮಾಡಲು ಉಪಯೋಗವಾಗುತ್ತದೆ. ಬದುಕಿರುವಾಗ ಮಾತ್ರವಲ್ಲದೆ ಮರಣದ ನಂತರವು ಸಮಾಜಕ್ಕೆ ಕೊಡುಗೆ ನೀಡುವ ಅವಕಾಶ ದೇಹದಾನದಿಂದ ದೊರೆಯುತ್ತದೆ. ಅತಿಯಾದ ಯೋಚನೆ ಮತ್ತು ಒತ್ತಡದಿಂದ ಆರೋಗ್ಯ ಹಾಳಾಗುತ್ತಿದೆ, ಮಾನಸಿಕವಾಗಿ ಆರೋಗ್ಯವಾಗಿದ್ದರೆ, ದೈಹಿಕವಾಗಿಯೂ ಆರೋಗ್ಯವಾಗಿರಬಹುದು. ಮನುಷ್ಯನ ದೇಹಕ್ಕೆ ಹಾನಿಯಾದಾಗ ಉಂಟಾಗುವ ತೊಂದರೆಗಳ ಬಗ್ಗೆ ತಿಳಿಸಿಕೊಟ್ಟು ಜೀವನದಲ್ಲಿ ನಾವು ಮಾಡುವ ದಾನಗಳಂತೆ ದೇಹ ದಾನವೂ ಸಮಾಜದ ಭವಿಷ್ಯದ ಪೀಳಿಗೆಗೆ ಉಪಯುಕ್ತವಾಗುವ ಸೇವೆ ಹಾಗೂ ಶ್ರೇಷ್ಠದಾನ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ ಹೆಚ್.ಎಸ್. ಕೊಂಗಳಪ್ಪ ಅವರು ಮಾತನಾಡಿ ನಾವು ಸತ್ತ ಮೇಲೆ ದೇಹ ಮಣ್ಣು ಮಾಡುತ್ತಾರೆ ಇಲ್ಲವೇ ಸುಡುತ್ತಾರೆ ಆದರೆ ದೇಹವನ್ನು ದಾನಮಾಡುವುದರಿಂದ ವೈದ್ಯಕೀಯ ಜಗತ್ತಿಗೆ ಅಂಗಾಂಗಳ ಬಗ್ಗೆ ಸಂಶೋಧನೆ ಮಾಡಲು ಅನುಕೂಲವಾಗುತ್ತದೆ ಆದ್ದರಿಂದ ಇದು ಶ್ರೇಷ್ಠದಾನ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್ ಹಾಗೂ ಯೂತ್ ರೆಡ್ ಕ್ರಾಸ್ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮ ರವರು ಉಪಸ್ಥಿತರಿದ್ದರು.



ಡಾ.ಎಂ.ಎನ್.ಶ್ಯಾಮಸುಂದರ್, ಹಿರಿಯ ಅಂಗರಚನಾಶಾಸ್ತ್ರ ಪ್ರಾಧ್ಯಾಪಕರು, ಜೆಎಸ್ಎಸ್ ಮೆಡಿಕಲ್ ಕಾಲೇಜು, ಮೈಸೂರು ಇವರು ದೇಹ ದಾನ ಶ್ರೇಷ್ಠದಾನ ಎಂಬ ವಿಷಯ ಕುರಿತು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್, ಪ್ರಾಚಾರ್ಯರಾದ ಡಾ ಹೆಚ್.ಎಸ್. ಕೊಂಗಳಪ್ಪರವರು ಹಾಗೂ ಯೂತ್ ರೆಡ್ ಕ್ರಾಸ್ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮ



ಡಾ.ಎಂ.ಎನ್.ಶ್ಯಾಮಸುಂದರ್, ಹಿರಿಯ ಅಂಗರಚನಾಶಾಸ್ತ್ರ ಪ್ರಾಧ್ಯಾಪಕರು, ಜೆಎಸ್ಎಸ್ ಮೆಡಿಕಲ್ ಕಾಲೇಜು, ಮೈಸೂರು ಇವರು ದೇಹ ದಾನ ಶ್ರೇಷ್ಠದಾನ ಎಂಬ ವಿಷಯ ಕುರಿತು ಅರಿವು ನೀಡುತ್ತಿರುವುದು. ಚಿತ್ರದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್, ಪ್ರಾಚಾರ್ಯರಾದ ಡಾ ಹೆಚ್.ಎಸ್. ಕೊಂಗಳಪ್ಪರವರು ಹಾಗೂ ಯೂತ್ ರೆಡ್ ಕ್ರಾಸ್ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮ